Reg. No. [ ]

**BBAKAL 154/BBMKAL 154**

# ಗುಣಾಂಕ ಆಧಾರಿತ ಎರಡನೆಯ ಚತುರ್ಮಾಸ ಬಿ.ಬಿ.ಎ./ಬಿ.ಬಿ.ಎಂ. ಪದವಿ ಪರೀಕ್ಷೆ, ಏಪ್ರಿಲ್/ಮೇ 2018

**(2017-18 Batch Onwards)**

**ಕನ್ನಡ**

**ಕನ್ನಡ ಭಾಷೆ**

Time : 3 Hours　　　　Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ದೇವರು, ಧರ್ಮ ಮತ್ತು ಭಕ್ತಿಯ ಹೆಸರಿನಲ್ಲಿ ಜನರು ನಡೆಸುವ ಡಾಂಭಿಕ ಆಚರಣೆಯನ್ನು ಕನಕದಾಸರು ತಮ್ಮ ಕೀರ್ತನೆಯಲ್ಲಿ ಹೇಗೆ ವಿಡಂಬಿಸಿದ್ದಾರೆ ? ವಿವರಿಸಿರಿ.

**ಅಥವಾ**

ದಲಿತರು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕು ಎನ್ನುವ ಆಶಯವು 'ದಹನದ ಕತೆ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

2) ನಮ್ಮ ಬದುಕಿಗೆ ಹಿರಿಯರ ಸಹಕಾರ, ಮಾರ್ಗದರ್ಶನಗಳು ಅಗತ್ಯ ಎನ್ನುವುದನ್ನು 'ಗೂಡು ಬಿಟ್ಟು ಹಾರಿದ ಹಕ್ಕಿ' ಕತೆಯು ಹೇಗೆ ಪ್ರತಿಪಾದಿಸುತ್ತದೆ ? ವಿವರಿಸಿರಿ.

**ಅಥವಾ**

ಸರಕು ಮತ್ತು ಸೇವೆಗಳ ತೆರಿಗೆಯಿಂದ ಆಗುವ ಪ್ರಯೋಜನಗಳೇನು ? ಈ ತೆರಿಗೆಯ ವಿವಿಧ ಹಂತದ ದರಶ್ರೇಣಿಗಳು ಯಾವುವು ? ವಿವರಿಸಿರಿ.

3) 'ಟೊಳ್ಳು ಗಟ್ಟಿ' ನಾಟಕವು ಜೀವನ ಶಿಕ್ಷಣದ ಮಹತ್ವವನ್ನು ಪ್ರತಿಪಾದಿಸುತ್ತದೆ. ಹೇಗೆ ? ವಿವರಿಸಿರಿ.

**ಅಥವಾ**

ಹೃದಯವಂತಿಕೆಯೇ ಜೀವನದ ಪ್ರಮುಖ ಮೌಲ್ಯ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ನಾವಿದನ್ನು ಕಳೆದುಕೊಳ್ಳುತ್ತಿದ್ದೇವೆಯೇ ? 'ಟೊಳ್ಳು ಗಟ್ಟಿ' ನಾಟಕದ ಆಧಾರದಲ್ಲಿ ಚರ್ಚಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ತೆರೆದ ಕಣ್ಣಿನಿಂದ ನೋಡುವ ಮನಸ್ಥಿತಿಯನ್ನು ಎಲ್ಲ ರಾಷ್ಟ್ರಗಳೂ ಬೆಳೆಸಿಕೊಳ್ಳಬೇಕು ಎನ್ನುವ ಆಶಯವು 'ಮುಲ್ಲಾ ಉಮರನ ಒಂಟಿ ಕಣ್ಣು' ಕವನದಲ್ಲಿ ವ್ಯಕ್ತವಾಗುವ ಬಗೆಯನ್ನು ವಿವರಿಸಿರಿ.

**ಅಥವಾ**

ಆಧುನಿಕತೆಯಿಂದಾಗಿ ಕೊಡವ ಸಂಸ್ಕೃತಿಯಲ್ಲಾಗುತ್ತಿರುವ ಬದಲಾವಣೆಗಳನ್ನು ಕವಿ ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

2) "ಪೂನಂ ಬದುಕಿನ ಹುಣ್ಣಿಮೆಯ ಬೆಳದಿಂಗಳಷ್ಟೇ ಅಲ್ಲ; ಪ್ರೇರಣೆಯ ಶುಭ್ರ ಬೆಳಕೂ ಹೌದು" ಹೇಗೆ ? ವಿವರಿಸಿರಿ.

ಅಥವಾ

"ಒಂದು ಸಮಾಜದ ಸಮತೋಲನವನ್ನು ಕಾಯ್ದುಕೊಳ್ಳಲು ಎಲ್ಲ ವೃತ್ತಿಗಳ ಸೇವೆಯೂ ಅವಶ್ಯಕ" ಎಂ.ಆರ್. ರವಿಯವರ ಲೇಖನದ ಆಧಾರದಲ್ಲಿ ಈ ಮಾತನ್ನು ಸಮರ್ಥಿಸಿರಿ.

3) ಸುಶಿಕ್ಷಿತ ಹೊಸ ತಲೆಮಾರು ಆಧುನೀಕರಣದತ್ತ ವಾಲುವುದನ್ನು ಪಾತುವಿನ ಪಾತ್ರದ ಮೂಲಕ ನಿರೂಪಕರು ಹೇಗೆ ಸೂಚಿಸುತ್ತಾರೆ ? ವಿವರಿಸಿರಿ.

ಅಥವಾ

"ಟೊಳ್ಳುಗಟ್ಟಿ" ನಾಟಕದ ಪೂರ್ವರಂಗದ ವೈಶಿಷ್ಟ್ಯವನ್ನು ವಿವರಿಸಿರಿ.

III. ಈ ಕೆಳಗಿನಗಿನವುಗಳಲ್ಲಿ ಒಂದರ ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ. **(1×5=5)**

1) ಬದುಕೇನು ಮಾಡಿದಿ-ಇಲ್ಲೇ ಸುಳ್ಳೇ
ಮುದಿಕ್ಯಾಗಿ ಮರೆದಲ್ಲೊ ಛೀ ಹುಚ್ಚ ಮರುಳೆ
ಅದಕೆ ಕೇಳುವ ಯಮ ಅಲ್ಲೇ-ಸದ್ಯ
ನೆದರಿಟ್ಟು ನೋಡಿಕೊ ಎಣಿಕೆಯ ಇಲ್ಲೇ.

2) ಬದುಕಲು ಬಿಡಿ ಎಂದು
ಬೇಡಿಕೊಳ್ಳುವ ಬದಲು
ಬದಲಾಗಬೇಕು ಕೋಮಲೆ
ಕಲಿಯಬೇಕು ಬದುಕುವ ಕಲೆ.

IV. ಯಾವುದಾದರೂ ಎರಡು ಸಾಲುಗಳಿಗೆ ಸಂದರ್ಭ-ಸ್ವಾರಸ್ಯ ವಿವರಿಸಿರಿ. **(2×4=8)**

1) ಜನ್ಮ ಸಾರ್ಥಕವಿಲ್ಲದವರೆಲ್ಲ ಭಾಗವತರ.
2) ಹಸಿದ ತೋಳದ ಹಿಂದೆ ಕುರಿಗಳ ಸಾಲು ಸಾಲು.
3) ಕಿವಿಗೊಟ್ಟು ಕೇಳಿರಣ್ಣ ನೋವಿನ ರಾಗವನ್ನು.
4) ಲಂಚ ಇಲ್ಲತೆ ಕಾರ್ಬಾರಿಲ್ಲೆ.

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಎಂ.ಆರ್. ರವಿ.

2) ಜಿ. ಎಸ್. ಟಿ. ಮಂಡಳಿ.

3) ಉಡೀಪ್ ಸೋಷಿಯಲ್ ವೆಲ್ಫೇರ್ ಸೊಸೈಟಿ.

4) ಶ್ರೀ ಕೃಷ್ಣ ಆಲನಹಳ್ಳಿ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಹಿರಿಯಣ್ಣಯ್ಯ.

2) ಟಿ.ಪಿ. ಕೈಲಾಸಂ.

3) ಮಕ್ಕಳಿಸ್ಕೂಲ್ ಮನೇಲಲ್ವೇ ?

4) ನಾಗಮ್ಮ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) 'ಹರಿಭಕ್ತಿಸಾರ' ಇದು ಯಾರ ಕೃತಿ ?

2) ಶಿಶುನಾಳ ಶರೀಫರ ಮೂಲ ಹೆಸರೇನು ?

3) 'ಶುರುವಾಗಲಿ ಕ್ರಾಂತಿ' ಕವನದ ಕವಿ ಯಾರು ?

4) ಮಹೇಶ್ ನಾಚಯ್ಯ ಅವರು ಸಂಪಾದಕರಾಗಿರುವ ಕೊಡವ ಭಾಷಾ ಪತ್ರಿಕೆ ಯಾವುದು ?

5) ಸರಕು ಮತ್ತು ಸೇವಾ ತೆರಿಗೆಯು ಯಾವ ದಿನಾಂಕದಿಂದ ಜಾರಿಗೆ ಬಂತು ?

6) ಪೂನಂ ಶ್ರೂತಿಯ ತಂದೆಯ ಹೆಸರೇನು ?

7) 'ಮಣ್ಣಿನ ಹಾಡು' ಕವನ ಸಂಕಲನದ ಕವಿ ಯಾರು ?

8) 'ಸತ್ತವರು ಎಲ್ಲಿ ಹೋಗ್ತಾರಾ ?' ಎಂಬ ಪ್ರಶ್ನೆಗೆ ಸುನಂದಾ ಅವರ ಕತೆಯ ಅಜ್ಜಿಯ ಉತ್ತರ ಏನಾಗಿತ್ತು ?

9) ''ಹಾರ್ಮಣಿ ಬಾರ್ಸೋ ಕೈ ಹಾಲ್ಸಾಸೀತೇ'' ? ಇದು ಯಾರ ಮಾತು ?

10) ಟಿ.ಪಿ.ಕೈಲಾಸಂ ಅವರ ಮೊದಲ ನಾಟಕ ಯಾವುದು ?

11) ಹಿರಿಯಣ್ಣಯ್ಯನ ಹಿರೀ ಮಗನ ಹೆಸರೇನು ?

12) 'ಟೊಳ್ಳು ಗಟ್ಟಿ' ನಾಟಕವು ಮೊದಲು ಯಾವ ವಾರಪತ್ರಿಕೆಯಲ್ಲಿ ಪ್ರಕಟವಾಯಿತು ?

---